1	ಶೇಂಗಾ	12.20
2	ಎಳ್ಳು	1.89
3	ಸೂರ್ಯಕಾಂತಿ	4.65
4	ಹರಳು	0.26
5	ಹುಚ್ಚೆಳ್ಳು	0.51
6	ಸಾಸುವೆ	0.04
7	ಸೋಯ ಅವರೆ	0.09
8	ಕುಸಬೆ	1.84
9	ಅಗಸೆ	0.38
	ಮೊತ್ತ	21.86
	ವಾಣಿಜ್ಯ ಬೆಳೆಗಳು	
1	ಹತ್ತಿ	6.20
2	ಕಬ್ಬು	2.27
3	ತಂಬಾಕು	0.49
	ಮೊತ್ತ	8.96
	ಒಟ್ಟು ಮೊತ್ತ	100.00

ಬ್ರಹ್ಮಾವರದಲ್ಲಿ ಕೃಷಿ ಕಾಲೇಜು ಸ್ಥಾಪನೆ.

3525 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಯಾವ ಜಿಲ್ಲೆಗಳಲ್ಲಿ ಕೃಷಿ ಕಾಲೇಜುಗಳು ಇರುತ್ತವೆ? (ಸ್ಥಳದ ಹೆಸರು ತಿಳಿಸುವುದು)

ಆ) ದಕ್ಷಿಣ ಕನ್ನಡದ ಬ್ರಹ್ಮಾವರದಲ್ಲಿ ಕೃಷಿ ಕಾಲೇಜು ಸ್ಥಾಪಿಸಿ, ಕರಾವಳಿ ಪ್ರದೇಶದಲ್ಲಿ ವಿಪುಲ ಸಂಶೋದನೆ ಕೃಷಿ ಶಿಕ್ಷಣ ಮತ್ತು ಕೃಷಿ ಅಭಿವೃದ್ಧಿ ಮೊದಲು ಸರ್ಕಾರ ಉದ್ದೇಶಿಸಿರುವುದೇ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು):

ಅ) ರಾಜ್ಯದಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಕೃಷಿ ಕಾಲೇಜುಗಳು ಇರುತ್ತವೆ:

1) ಬೆಂಗಳೂರು ಜಿಲ್ಲೆಯ ಜಿ.ಕೆ.ವಿ.ಕೆ. ಬೆಂಗಳೂರು.

2) ಶಿವಮೊಗ್ಗ ಜಿಲ್ಲೆಯ ನವಿಲೆ.

3) ಮಂಡ್ಯ ಜಿಲ್ಲೆಯ ಮಂಡ್ಯ.

4) ಧಾರವಾಡ ಜಿಲ್ಲೆಯ ಧಾರವಾಡ.

5) ರಾಯಚೂರು ಜಿಲ್ಲೆಯ ರಾಯಚೂರು ಮತ್ತು

6) ಬಿಜಾಪುರ ಜಿಲ್ಲೆಯ ಬಿಜಾಪುರ.

ಆ) ದಕ್ಷಿಣ ಕನ್ನಡದ ಬ್ರಹ್ಮಾವರದಲ್ಲಿ ಕೃಷಿ ಕಾಲೇಜು ಸ್ಥಾಪಿಸುವ ಉದ್ದೇಶವು ಸದ್ಯಕ್ಕೆ ಸರ್ಕಾರಕ್ಕೆ ಇರುವುದಿಲ್ಲ.